**C**

**SL. No. : N**

ಒಟ್ಟು ಪ್ರಶ್ನೆಗಳ ಸಂಖ್ಯೆ : 64 ]
Total No. of Questions : 64 ]

**CCE PR REVISED**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**ಸಂಕೇತ ಸಂಖ್ಯೆ : 01-K**

**Code No. : 01-K**

# ವಿಷಯ : ಪ್ರಥಮ ಭಾಷೆ — ಕನ್ನಡ

# Subject : First Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

ದಿನಾಂಕ : 22. 06. 2018 ] [ Date : 22. 06. 2018

ಸಮಯ : ಬೆಳಿಗ್ಗೆ 9-30 ರಿಂದ 12-45 ರವರೆಗೆ ] [ Time : 9-30 A.M. to 12-45 P.M.

ಗರಿಷ್ಠ ಅಂಕಗಳು : 125 ] [ Max. Marks : 125

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 64 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

## ವಿಭಾಗ – 'ಎ'

### (ಪಠ್ಯಗಳ ಅಧ್ಯಯನ – ಗದ್ಯ, ಪದ್ಯ, ಪೋಷಕ ಅಧ್ಯಯನ)

**ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರಿಸಿ :** $16 \times 1 = 16$

1. ಯುದ್ಧದ ಬಗೆಗೆ ಮುದುಕಿಯ ಅಭಿಪ್ರಾಯವೇನು ?
2. ಲಂಡನ್ನಿನಲ್ಲಿ ನೆಲ್ಸನ್‌ರವರ ಮೂರ್ತಿಯಿರುವ ಸ್ಥಳದ ಹೆಸರೇನು ?
3. ವಿಶ್ವೇಶ್ವರಯ್ಯ ಅವರ ಹುಟ್ಟುಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಆಚರಿಸಲಾಗುತ್ತಿದೆ ?
4. ಮನೆಮಂಚಮ್ಮನ ಕತೆ ಹೇಳಿದ ಕವಿಯ ಹೆಸರೇನು ?
5. ಭಗವದ್ಗೀತೆಯನ್ನು ರಚಿಸಿದವರು ಯಾರು ?
6. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು ?
7. ನದೀಜಲಗಳು ಏನಾಗಿವೆ ?
8. ಹಕ್ಕಿಯು ಯಾವುದರ ಸಂಕೇತವಾಗಿದೆ ?
9. ಹಕ್ಕಿ ಯಾರನ್ನು ಹರಸಿದೆ ?
10. ಕುಂಪಣಿ ಸರಕಾರ ಹೊರಡಿಸಿದ ಆದೇಶ ಏನು ?
11. ಅಶ್ವಿನಿದೇವತೆಗಳ ವರಬಲದಿಂದ ಜನಿಸಿದವರು ಯಾರು ?
12. ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ ?
13. ದಿನಪಸುತ ಎಂದರೆ ಯಾರು ?
14. ದ್ರೋಣನು ಯಾರೊಡನೆ ಪರಶುರಾಮನ ಬಳಿಗೆ ಬಂದನು ?
15. ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ ?
16. ಪುಟ್ಟ ಪೋರಿಯ ಅಮ್ಮ ಎಲ್ಲಿ ಮಲಗಿದ್ದಾಳೆ ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** $16 \times 2 = 32$

17. ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು ?
18. ಸಾಮ್ರಾಟರ ರಾಜ್ಯಾಭಿಷೇಕವಾಗುವ ಸಿಂಹಾಸನದ ಮೇಲಿರುವ ಕಲ್ಲುಪಾಟಿಯ ವಿಶೇಷತೆಯೇನು ?
19. ಅಶೋಕ ಪೈ ಅವರು ಹೇಳಿದ ಸಂಶೋಧನಾ ಸತ್ಯವನ್ನು ತಿಳಿಸಿ.
20. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಯನ್ನು ತಿಳಿಸಿ.
21. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು ?
22. ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯನ್ನು ನೀಡಿದನು ?
23. ದುಷ್ಟಬುದ್ಧಿಯು ತನ್ನ ತಂದೆಯನ್ನು ಸಾಕ್ಷಿಮಾಡಿ ಒಪ್ಪಿಸಿದ ಬಗೆಯನ್ನು ತಿಳಿಸಿ.

24. ಸುಕುಮಾರಸ್ವಾಮಿಯು ಹೇಗೆ ಸುಖಭೋಗಗಳನ್ನು ಅನುಭವಿಸುತ್ತಿದ್ದನು ?

25. ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ ?

26. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ತಿಳಿಸಿ.

27. ದ್ರುಪದನು ದ್ರೋಣರಿಗೆ ಹೇಳಿದ ಮಾತುಗಳು ಯಾವುವು ?

28. ದ್ರುಪದನ ಮಾತಿಗೆ ದ್ರೋಣನ ಪ್ರತಿಕ್ರಿಯೆಯನ್ನು ತಿಳಿಸಿ.

29. ಭಗತ್‌ಸಿಂಗನು ಅಂತರ್ಮುಖಿಯಾಗಲು ಕಾರಣವಾದ ಒಕ್ಕಣೆಯನ್ನು ತಿಳಿಸಿ.

30. ಮೃಗದ ಬಾಹ್ಯ ಆಕಾರ ಹೇಗಿತ್ತು ?

31. ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು ?

32. 'ಬೀಸುಕಲ್ಲು' ಎಂಬ ಉತ್ತರ ಬರಲು ಹೇಳಿದ ಒಗಟನ್ನು ಬರೆಯಿರಿ.

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :** $6 \times 3 = 18$

33. "ಸಾಮಾಜಿಕ ಕಾನೂನುಗಳ ಹರಿಕಾರ"

34. "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ"

35. "ರಿಸಿಯರ ರೂಪಂ ಕಾಣ್ಗುಮಂದೀತನುಂ ತಪಂಬಡುಗುಮ್"

36. "ಮಂಗಳ ಲೋಕದ ಅಂಗಳಕೇರಿ"

37. "ಹೊಡೆದರೊ ಗುಂಡ ಕರುಣ ಇಲ್ಲದ್ಹಂಗ"

38. "ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ"

**ಈ ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿ / ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** $2 \times 3 = 6$

39. ಕುವೆಂಪು

40. ಸಾರಾ ಅಬೂಬಕ್ಕರ್

41. **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** $1 \times 4 = 4$

ಮಾರಿಗೌತಣವಾಯ್ತು ನಾಳಿನ

.......................................................................

.......................................................................

.......................................................................

.......................................................................

ವೀರರ್ಶೈವರ ನೋಯಿಸೆನು ರಾಜೀವಸಖನಾಣೆ

***ಅಥವಾ***

ಕೊರಳ ಸೆರೆ ಹಿಗ್ಗಿದವು ದೃಗುಜಲ

..........................................................................

..........................................................................

..........................................................................

..........................................................................

ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ

42. **ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ :** 1 × 4 = 4

ಸುತ್ತಲು ಕವಿಯುವ ಕತ್ತಲೆಯೊಳಗೆ

ಪ್ರೀತಿಯ ಹಣತೆಯ ಹಚ್ಚೋಣ

ಬಿರುಗಾಳಿಗೆ ಹೊಯ್ದಾಡುವ ಹಡಗನು

ಎಚ್ಚರದಲಿ ಮುನ್ನಡೆಸೋಣ.

**ಈ ಕಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 2 × 4 = 8

43. ನಂಬಿಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆಯೆಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

***ಅಥವಾ***

ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ ?

44. ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.

***ಅಥವಾ***

ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.

45. **ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** 2 × 2 = 4

ಬೆಳಗಾವಿಯ ಒಂದು ಬಡಾವಣೆ. ಅಲ್ಲಿನ ನಿವಾಸಿಗಳು ಪ್ರತಿನಿತ್ಯ ಮನೆಯ ಕಸಗುಡಿಸಿ ತಂದು ರಸ್ತೆಗೆ ಸುರಿಯುತ್ತಿದ್ದರು. ಅವರಲ್ಲೊಬ್ಬರನ್ನು "ಕಸತಂದು ರಸ್ತೆಗೆ ಯಾಕೆ ಹಾಕ್ತೀರ ? ತೊಟ್ಟಿಗೆ ಯಾಕೆ ಹಾಕಲ್ಲ ?" ಎಂದು ಕೇಳಿದಾಗ ಹೀಗೆ ಗುಡುಗಿದರು; "ಮೊದಲ್ನೇದಾಗಿ, ತೊಟ್ಟಿ ಈ ರಸ್ತೆಯ ತುದೀಲಿದೆ. ಎರಡನೆಯದಾಗಿ, ನಾವ್ಯಾಕೆ ಅಲ್ಲಿಯವರೆಗೂ ತೆಗೆದುಕೊಂಡು ಹೋಗಿ ಹಾಕ್ಬೇಕು ? ನಾವು ಹೊರಗೆ ಸುರೀತೀವಿ. ಸಂಬಳ ತಗೋತಾರಲ್ಲ ಮಹಾನಗರ ಪಾಲಿಕೆ ಆಳುಗಳು, ಅವರು ತೊಗೊಂಡು ಹೋಗಿ ಹಾಕ್ಲಿ

ತೊಟ್ಟೀಲಿ." "ಆದ್ರೆ ನಿಮ್ಮ ರಸ್ತೇನೇ ಕೊಳೆ ಆಗುತ್ತಲ್ಲ ಮನೆ ಮುಂದೆ ಕಸ ಹಾಕಿದ್ರೆ" ಅಂದಾಗ "ರಸ್ತೆ ನಮ್ದು ಅಂತ ಯಾರು ಹೇಳಿದ್ರು ನಿಮಗೆ ? ಈ ಮನೆ ನಮ್ದು, ರಸ್ತೆ ಸರ್ಕಾರದ್ದು. ಅದನ್ನು ಸರಿಯಾಗಿ ಇಟ್ಟುಕೊಳ್ಳೋದು ಅವರ ಕೆಲಸ" ಅಂದರು. ಈ ಉದಾಹರಣೆ ನಮ್ಮ ಪರಿಸರದ ಬಗ್ಗೆ ಜನಸಾಮಾನ್ಯರಲ್ಲಿರುವ ಅಕ್ಷಮ್ಯವಾದ ಬೇಜವಾಬ್ದಾರಿತನವನ್ನು ಎತ್ತಿ ತೋರಿಸುತ್ತದೆ. ಪರಿಸರ ಸಂರಕ್ಷಣೆಯ ಸಮಸ್ತ ಜವಾಬ್ದಾರಿಯೂ ಸರ್ಕಾರದ್ದೇ ಎಂಬ ನಿರ್ಲಿಪ್ತ ಮನೋಭಾವವೇ ನಮ್ಮೆಲ್ಲ ಸಮಸ್ಯೆಗಳಿಗೂ ಕಾರಣ.

ಪರಿಸರ ಪ್ರಜ್ಞೆಯ ತೀವ್ರ ಅಭಾವ ಬಹುಸಾಮಾನ್ಯವಾದರೂ ಪರಿಸರವನ್ನು ಸಂರಕ್ಷಿಸಲು ಹೋರಾಟಕ್ಕೆ ನಿಲ್ಲುವ ಅಪೂರ್ವ ಪ್ರಯತ್ನಗಳನ್ನು ನಾವು ಆಗಾಗ ಅಪರೂಪವಾಗಿ ನೋಡಬಹುದು. 'ಚಿಪ್ಕೋ ಚಳವಳಿ' ಇದಕ್ಕೊಂದು ಉತ್ತಮ ಉದಾಹರಣೆ. ಚಿಪ್ಕೋ – ಈ ಹೆಸರು ನಿಮಗೆ ವಿಚಿತ್ರವಾಗಿ ಕೇಳಬಹುದು. ಇದೊಂದು ಹಿಂದಿ ಭಾಷೆಯ ಪದ. ಅರ್ಥ : ಅಪ್ಪಿಕೋ, ತಬ್ಬಿಕೋ! ಈ ಚಳವಳಿ ಪ್ರಾರಂಭವಾದದ್ದು 1973 ರಲ್ಲಿ. ಉತ್ತರ ಪ್ರದೇಶದ ಚಮೋಲಿ ಜಿಲ್ಲೆಯ ಮಂಡಲ್ ಎಂಬ ಹಳ್ಳಿಯಲ್ಲಿ. ಈ ಚಳವಳಿಗೆ ಕಾರಣರಾದವರು ಮಂಡಲ್ ಹಳ್ಳಿಯ ಅನಕ್ಷರಸ್ಥ ಮಹಿಳೆಯರು.

*ಪ್ರಶ್ನೆಗಳು :*

ಅ) ಚಿಪ್ಕೋ ಚಳವಳಿಯನ್ನು ಕುರಿತು ಬರೆಯಿರಿ.

ಆ) ಪರಿಸರ ಸ್ವಚ್ಛತೆಯ ಕುರಿತು ಜನಸಾಮಾನ್ಯರಲ್ಲಿರುವ ಸಾಮಾನ್ಯ ಮನೋಭಾವನೆಗಳೇನು ?

## ವಿಭಾಗ – 'ಬಿ'

### (ಅನ್ವಯಿಕ ವ್ಯಾಕರಣ, ಅಲಂಕಾರ ಹಾಗೂ ಛಂದಸ್ಸು)

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** 10 × 1 = 10

46. 'ಸಂಗ್ರಹಾಲಯ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

(ಎ) ಗುಣ ಸಂಧಿ (ಬಿ) ಸವರ್ಣದೀರ್ಘ ಸಂಧಿ

(ಸಿ) ವೃದ್ಧಿ ಸಂಧಿ (ಡಿ) ಅನುನಾಸಿಕ ಸಂಧಿ

47. ಸಂಬೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ, ಕ್ರಿಯಾಪದಗಳಿಗೆ ಬೇರೆ ಬೇರೆ ವಿಶೇಷಣಗಳು ಬರುವಾಗ ಕೊನೆಯ ವಿಶೇಷಣ ಬಿಟ್ಟು ಉಳಿದವುಗಳ ಮುಂದೆ ಬಳಸುವ ಲೇಖನ ಚಿಹ್ನೆ

(ಎ) ಅಲ್ಪವಿರಾಮ (ಬಿ) ಅರ್ಧವಿರಾಮ

(ಸಿ) ಪೂರ್ಣವಿರಾಮ (ಡಿ) ಉದ್ಧರಣ

48. 'ಕರ್ಮಧಾರಯ' ಸಮಾಸಕ್ಕೆ ಉದಾಹರಣೆಯಿದು

(ಎ) ನೆಯ್ದುವಸ್ತ್ರ (ಬಿ) ಮಹೀಪತಿ

(ಸಿ) ಕಣ್ದೆರೆ (ಡಿ) ಹೆದ್ದೊರೆ

49. ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣಾಕ್ಷರಗಳ ಸಂಖ್ಯೆ

(ಎ) ಐದು (ಬಿ) ಒಂಬತ್ತು

(ಸಿ) ಹತ್ತು (ಡಿ) ಹದಿಮೂರು

50. ಕ್ರಿಯೆ ನಡೆದ ರೀತಿಯನ್ನು ಹೇಳುವಂತಹ ಅವ್ಯಯಗಳನ್ನು ಹೀಗೆನ್ನುತ್ತೇವೆ

(ಎ) ಕ್ರಿಯಾರ್ಥಕ (ಬಿ) ಅನುಕರಣ

(ಸಿ) ಸಾಮಾನ್ಯ (ಡಿ) ಸಂಬಂಧಾರ್ಥಕ

51. ಕೃದಂತಭಾವನಾಮಕ್ಕೆ ಉದಾಹರಣೆಯಾಗುವ ಪದವಿದು

(ಎ) ನೋಟ (ಬಿ) ನೋಡಲು

(ಸಿ) ನೋಡುವ (ಡಿ) ನೋಡದ

52. ಕಾರವಾರದಲ್ಲಿ ಮಲೇರಿಯಾ ಹಬ್ಬಿ, ವೀರೇಶ್ವರ ಪಾಠಕ್‌ರವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿ, ಅವರು ಅಲ್ಲಿಂದ ವರ್ಗಾವಣೆ ಹೊಂದುವಂತೆ ಆಯಿತು. – ಈ ವಾಕ್ಯವು

(ಎ) ಮಿಶ್ರವಾಕ್ಯ (ಬಿ) ಸಾಮಾನ್ಯ ವಾಕ್ಯ

(ಸಿ) ಸಂಯೋಜಿತ ವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ

53. 'ಮಾಡೇವು' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ

(ಎ) ವಿಧ್ಯರ್ಥಕ (ಬಿ) ಸಂಬಂಧಾರ್ಥಕ

(ಸಿ) ನಿಷೇಧಾರ್ಥಕ (ಡಿ) ಸಂಭಾವನಾರ್ಥಕ

54. 'ಸಾವಿತ್ರಿಯೊಳ್' ಪದದಲ್ಲಿರುವ ವಿಭಕ್ತಿಯಿದು

(ಎ) ಪ್ರಥಮಾ (ಬಿ) ತೃತೀಯಾ

(ಸಿ) ಪಂಚಮೀ (ಡಿ) ಸಪ್ತಮೀ

55. ಆತ್ಮಾರ್ಥಕ ಸರ್ವನಾಮ ಪದವಿದು

(ಎ) ನಿಮ್ಮ (ಬಿ) ತಮ್ಮ

(ಸಿ) ನೀವು (ಡಿ) ಅವರು

**ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ :** $4 \times 1 = 4$

56. ಊರೂರು : ದ್ವಿರುಕ್ತಿ :: ಕೆನೆಮೊಸರು : ......................... .

57. ಯುದ್ಧ : ಜುದ್ದ :: ಪ್ರಸಾದ : ......................... .

58. ಶ್ರಮಣಿ : ತಪಸ್ವಿನಿ :: ಸುರಭಿ : ......................... .

59. ಆಸ್ಪತ್ರೆ : ಪೋರ್ಚ್‌ಗೀಸ್ :: ದವಾಖಾನೆ : ......................... .

60. **ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ :** $1 \times 3 = 3$

ಪುಟ್ಟಿದ ನೂರ್ವರುಮೆನ್ನೊಡ

ವುಟ್ಟಿದ ನೂರ್ವರುಮಿದಿರ್ಚೆ ಸತ್ತೊಡೆ ಕೋಪಂ

*ಅಥವಾ*

ಖಳನೊಳವಿಂಗೆ ಕುಪ್ಪೆವರಮೆಂಬವೊಲಾಂಬರಮುಂಟೆ ನಿನ್ನದೊಂ

61. **ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ :** 1 × 3 = 3

"ಮಾರಿಗೌತಣವಾಯ್ತು ನಾಳಿನ ಭಾರತವು"

***ಅಥವಾ***

"ಅಚ್ಛೋದ ಸರೋವರವು ತ್ರೈಲೋಕ್ಯಲಕ್ಷ್ಮೀಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು."

## ವಿಭಾಗ – 'ಸಿ'

### (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

62. **ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ *ಒಂದನ್ನು* ವಿಸ್ತರಿಸಿ ಬರೆಯಿರಿ :** 1 × 3 = 3

- ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ
- ದೇಶ ನೋಡು; ಕೋಶ ಓದು
- ಆಳಾಗಬಲ್ಲವನು ಅರಸಾಗಬಲ್ಲನು

63. ನಿಮ್ಮನ್ನು ಇಳಕಲ್ಲಿನ ಬಾಲಿಕೆಯರ ಸರ್ಕಾರಿ ಪ್ರೌಢಶಾಲೆಯ 'ಯಶೋಧಾ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಏರ್ಪಡಿಸಿದ 'ವಿದ್ಯಾರ್ಥಿನಿಯರ ಕರಾಟೆ ಕೌಶಲ ತರಬೇತಿ'ಯ ಸಮಾರೋಪ ಸಮಾರಂಭದ ವರದಿಯನ್ನು ಪ್ರಕಟಿಸುವಂತೆ ಕೋರಿ 'ಕನ್ನಡ ಪ್ರಭ' ದಿನಪತ್ರಿಕೆಯ ಸಂಪಾದಕರಿಗೆ ಮನವಿ ಪತ್ರವೊಂದನ್ನು ಬರೆಯಿರಿ. 1 × 5 = 5

***ಅಥವಾ***

ನಿಮ್ಮನ್ನು ವಿಜಯಪುರದ ಐಶ್ವರ್ಯ ನಗರಲ್ಲಿ ವಾಸವಾಗಿರುವ 'ರಾಜೇಶ್ವರಿ' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ಆಚರಿಸಿದ ವಾರ್ಷಿಕೋತ್ಸವ ಕಾರ್ಯಕ್ರಮಗಳ ವಿಶೇಷತೆಯನ್ನು ಕುರಿತು ಬಾದಾಮಿಯ ಪುಲಿಕೇಶಿ ನಗರದಲ್ಲಿರುವ ಅಣ್ಣ 'ಬಸವೇಶ'ನಿಗೆ ಪತ್ರವೊಂದನ್ನು ಬರೆಯಿರಿ.

64. **ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ *ಒಂದನ್ನು* ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ :** 1 × 5 = 5

- ಸ್ವಚ್ಛ ಭಾರತ ಅಭಿಯಾನದಲ್ಲಿ ವಿದ್ಯಾರ್ಥಿಗಳ ಪಾತ್ರ
- ರಾಷ್ಟ್ರೀಯ ಭಾವೈಕ್ಯತೆಯಲ್ಲಿ ರಾಷ್ಟ್ರೀಯ ಹಬ್ಬಗಳ ಮಹತ್ವ
- ಮಹಿಳಾ ಸಬಲೀಕರಣ